೨೧೦

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳ ತಡೆಯಲು ದೂರು ನಿವಾರಣಾ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ: ೧.ಸರ್ವೋಚ್ಛ ನ್ಯಾಯಾಲದ ರಿಟ್ ಅರ್ಜಿಗಳ ಸಂ:೬೬೬-೬೬೮/೯೨ರ ಮೇಲಿನ ದಿ:೧೩.೮.೯೭ರ ತೀರ್ಪು.
೨.ಸರ್ಕಾರಿ ಆದೇಶ ಸಂಖ್ಯೆ:ಮಮಇ ೩೬ ಮಮಅ ೯೮, ದಿನಾಂಕ ೦೮.೦೬.೨೦೦೧.

-----

<u>ಪ್ರಸ್ತಾವನೆ:</u>

ಕ್ರಮ ಸಂಖ್ಯೆ(೧)ರಲ್ಲಿ ಸರ್ವೋಚ್ಛ ನ್ಯಾಯಾಲಯವು ರಿಟ್ ಅರ್ಜಿಗಳ ಸಂಖ್ಯೆ ೬೬೬-೬೬೮/೯೨ರಲ್ಲಿ ದಿನಾಂಕ ೧೩.೦೮.೧೯೯೭ರಂದು ಹೊರಡಿಸಲಾದ ಮಾರ್ಗ ಸೂಚಿಗಳನ್ವಯ ಕೆಲಸ ಮಾಡುತ್ತಿರುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳ ತಡೆಯಲು ಯಾವುದೇ ರೀತಿಯ ದೂರಿನ ಬಗ್ಗೆ ಪರಿಹರಿಸಲು ಉದ್ಯೋಗದಾತ ಸಂಸ್ಥೆಯಲ್ಲಿ ಸೂಕ್ತ ದೂರು ರಚನಾ ವಿಭಾಗವನ್ನು ಸೃಜಿಸುವಂತೆ ಸರ್ವೋಚ್ಛ ನ್ಯಾಯಾಲಯವು ರಿಟ್ ಅರ್ಜಿಗಳ ಸಂ: ೬೬೬-೬೬೮/೯೨ರ ದಿನಾಂಕ ೧೩.೦೮.೧೯೯೭ರ ತೀರ್ಪಿನಲ್ಲಿ ಮಾರ್ಗದರ್ಶನ ನೀಡಿದೆ.

ಕ್ರಮ ಸಂಖ್ಯೆ (೨)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಸರ್ವೋಚ್ಛ ನ್ಯಾಯಾಲಯದ ತೀರ್ಪಿನಂತೆ, ರಾಜ್ಯ ಮಟ್ಟದ ಸಮಿತಿಯನ್ನು ರಚಿಸಿ ಆಗಿಂದಾಗ್ಗೆ ಸಭೆ ಸೇರಿ, ರಾಜ್ಯದಲ್ಲಿ ಮಹಿಳೆಯರು ಕೆಲಸ ಮಾಡುವ ಸ್ಥಳಗಳಲ್ಲಿ ಅವರ ಮೇಲೆ ನಡೆಯುವ ಲೈಂಗಿಕ ಕಿರುಕುಳ ತಡೆಯುವಲ್ಲಿ ತೆಗೆದುಕೊಂಡ ಕ್ರಮದ ಬಗ್ಗೆ ಪರಾಮರ್ಶಿಸಲು ಸೂಚಿಸಲಾಗಿದೆ.

ಆದಕ್ಕನುಸಾರವಾಗಿ ಪ್ರತಿಯೊಂದು ಇಲಾಖೆಯಲ್ಲಿ ದೂರುಗಳ ಸಮಿತಿಯನ್ನು ರಚಿಸಬೇಕಾಗಿದೆ. ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದೂರುಗಳ ಸಮಿತಿಗಳನ್ನು ರಚಿಸಿದೆ. ದೂರುಗಳ ಸಮಿತಿಯ ರಚನೆಯನ್ನು ಸುಸೂತ್ರಗೊಳಿಸಲು ಹಾಗೂ ಅವುಗಳನ್ನು ಕಾರ್ಯೋನ್ಮುಖಗೊಳಿಸಲು, ಜಿಲ್ಲಾಮಟ್ಟದಲ್ಲಿ, ಸಚಿವಾಲಯ, ಮಂಡಳಿಗಳು, ಸ್ವಾಯತ್ತ ಸಂಸ್ಥೆಗಳು ಮತ್ತು ಆಯೋಗಗಳಲ್ಲಿ ದೂರುಗಳ ಸಮಿತಿಯನ್ನು ರಚಿಸಲು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

......೨.

ಸರ್ಕಾರದ ಆದೇಶ ಸಂಖ್ಯೆ: ಮಮಇ ೫೭ ರಾಮಅ ೨೦೦೨
ಬೆಂಗಳೂರು, ದಿನಾಂಕ ೨೮.೦೮.೨೦೦೨.

ಕೆಲಸಮಾಡುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳಗಳನ್ನು ತಡೆಯಲು ದೂರು ನಿರ್ವಹಣಾ ಸಮಿತಿಗಳನ್ನು ಕೆಳಕಂಡ ಮಾರ್ಗಸೂಚಿಗಳಂತೆ ರಚಿಸಿ ಕಾರ್ಯ ನಿರ್ವಹಿಸಲು ಆದೇಶಿಸಿದೆ.

ಜಿಲ್ಲೆಗಳಲ್ಲಿ ದೂರುಗಳ ಸಮಿತಿ ರಚಿಸುವ ಬಗ್ಗೆ.

ಜಿಲ್ಲಾ ಮಟ್ಟದಲ್ಲಿ ಎರಡು ದೂರು ಸಮಿತಿಗಳು ಮಾತ್ರ ಇರಬೇಕು. ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಇಲಾಖೆಗಳಿಗೆ ಜಿಲ್ಲಾ ಪಂಚಾಯತ್ ಮಟ್ಟದಲ್ಲಿ ಒಂದು ದೂರುಗಳ ಸಮಿತಿ ಇರಬೇಕು. ಸಂಬಂಧಪಟ್ಟ ಮುಖ್ಯ ನಿರ್ವಹಣಾಧಿಕಾರಿಯವರು ಆ ಸಮಿತಿಯನ್ನು ರಚಿಸಬೇಕು.

ಜಿಲ್ಲೆಯಲ್ಲಿ ಎರಡನೇ ದೂರು ಸಮಿತಿಯನ್ನು ಜಿಲ್ಲಾಧಿಕಾರಿಯವರು ರಚಿಸಬೇಕು. ಜಿಲ್ಲಾ ಪಂಚಾಯತ್ ನಿಯಂತ್ರಣಕ್ಕೊಳಪಡದ ಕಂದಾಯ ಇಲಾಖೆ, ಪೋಲೀಸ್ ಮತ್ತು ಇತರೆ ಇಲಾಖೆಗಳು ಜಿಲ್ಲಾಧಿಕಾರಿಗಳ ಆಶ್ರಯದಲ್ಲಿ ರೂಪಿತಗೊಂಡ ಒಂದು ದೂರುಗಳ ಸಮಿತಿಯನ್ನು ಹೊಂದಿರುತ್ತವೆ. ಉದಾಹರಣೆಗೆ, ನಗರಸಭೆ, ಪ್ರಾದೇಶಿಕ ಸಾರಿಗೆ ಇಲಾಖೆ, ಲೋಕೋಪಯೋಗಿ ಇಲಾಖೆ, ಸರ್ಕಾರಿ ಆಸ್ಪತ್ರೆಗಳು, ಅಬಕಾರಿ ಇಲಾಖೆ ಮತ್ತು ಇನ್ನೂ ಮುಂತಾದ ಇಲಾಖೆಯ ನೌಕರರುಗಳು ಜಿಲ್ಲಾಧಿಕಾರಿಯವರು ರಚಿಸಲ್ಪಟ್ಟ ದೂರುಗಳ ಸಮಿತಿಗೆ ತಮ್ಮ ಕುಂದುಕೊರತೆಗಳನ್ನು ಬರೆದುಕೊಳ್ಳುವರು.

ಜಿಲ್ಲೆಗಳಲ್ಲಿ ಎರಡು ದೂರುಗಳ ಸಮಿತಿಯನ್ನು ರಚಿಸುವಲ್ಲಿ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳುವರು.

೧) ಆಯಾಯ ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಅವರ ಕೈಕೆಳಗೆ ಬರುವ ಇಲಾಖೆಗಳ ಜಿಲ್ಲಾ ಮಟ್ಟದ

ಅಧಿಕಾರಿಗಳಿಂದ ಎ, ಬಿ, ಸಿ ಮತ್ತು ಡಿ ಗುಂಪುಗಳಿಗೆ ಸೇರಿದ ೪ ಜನ ನೌಕರರ ಪ್ರತಿನಿಧಿಗಳ ಹೆಸರುಗಳ ಪಟ್ಟಿಯನ್ನು ಪಡೆಯುತ್ತಾರೆ. ಈ ರೀತಿ ಪಡೆದುಕೊಂಡ ಪಟ್ಟಿಯಲ್ಲಿ, ಶೇಕಡಾ ೫೦ ಕ್ಕಿಂತ ಹೆಚ್ಚು ಅಂದರೆ ೩ ಜನ ಮಹಿಳಾ ಪ್ರತಿನಿಧಿಗಳ ಹೆಸರಿರುವಂತೆ ನೋಡಿಕೊಳ್ಳುವುದು.

೨) ಈ ರೀತಿಯ ಪಟ್ಟಿಯನ್ನು ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಕಚೇರಿಯಲ್ಲಿ ಸೂಚನಾ ಫಲಕಗಳ ಮೇಲೆ ಪ್ರದರ್ಶಿಸಿ ೧೫ ದಿನಗಳಿಗೆ ಮೀರದಂತೆ ನಿಗದಿತ ಸಮಯದಲ್ಲಿ ಸರ್ಕಾರಿ ನೌಕರರಿಂದ ಆಕ್ಷೇಪಣೆಗಳನ್ನು ಕರೆಯಬೇಕು.

೩) ೧೬ನೇ ದಿನ ಪ್ರತಿಯೊಂದು ಎ, ಬಿ, ಸಿ ಮತ್ತು ಡಿ ಗುಂಪುಗಳಿಗೆ ಸೇರಿದ ಸರ್ಕಾರಿ ನೌಕರರ ೪ ಪಟ್ಟಿಗಳಲ್ಲಿ ಪಟ್ಟಿಯಲ್ಲಿನ ಹೆಸರುಗಳನ್ನು ಹಾಕಲಾಗುವುದು. ತಲಾ ಎರಡು ಹೆಸರುಗಳನ್ನು ಪ್ರತಿಯೊಂದು ಗುಂಪುಗಳ ಪಟ್ಟಿಯಲ್ಲಿಂದ ಲಾಟರಿ ಮೂಲಕ ಎತ್ತಲಾಗುವುದು. ಈ ರೀತಿ ಲಾಟರಿಯಿಂದ ಆರಿಸಿ ಬಂದ ೮ ಜನರು ಜಿಲ್ಲಾ ಮಟ್ಟದ ದೂರು ಸಮಿತಿಯಲ್ಲಿ ಸದಸ್ಯರಾಗಿರುತ್ತಾರೆ. ಕನಿಷ್ಠ ೪ ಜನ ಮಹಿಳಾ ಸದಸ್ಯರಿರುವಂತೆ ಗಮನಹರಿಸುವುದು.

೪) ಇದರ ಜೊತೆ ಪೊಲೀಸ್ ಇಲಾಖೆಯಿಂದ ಒಬ್ಬ ಮಹಿಳಾ ಸದಸ್ಯರ ಹೆಸರನ್ನು ಪ್ರತಿಯೊಂದು ದೂರು ಸಮಿತಿಗೆ ಸೇರಿಸತಕ್ಕದ್ದು.

೫) ಜಿಲ್ಲಾಧಿಕಾರಿ ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಾಯಕ ನಿರ್ದೇಶಕರ ಸಮಾಲೋಚನೆಯಿಂದ, ಕಾರ್ಯ ನಿರ್ವಹಿಸುತ್ತಿರುವ ಸ್ಥಳಗಳಲ್ಲಿನ ಲೈಂಗಿಕ ಕಿರುಕುಳದ ಬಗ್ಗೆ ಪರಿಚಯವಿರುವ ಹಾಗೂ ಕಾನೂನು ತಿಳುವಳಿಕೆಯಿರುವ ಇಬ್ಬರು ಸರ್ಕಾರೇತರ ಸಂಸ್ಥೆಗಳ

ಪ್ರತಿನಿಧಿಗಳನ್ನು (ಪ್ರತಿ ದೂರು ಸಮಿತಿಗೆ ಒಂದೊಂದು ಸರ್ಕಾರೇತರ ಸಂಸ್ಥೆಯಂತೆ) ಒಂದು ಜಿಲ್ಲಾ ಸಮಿತಿಗಳಿಗೆ ಸದಸ್ಯರನ್ನಾಗಿ ಆಯ್ಕೆ ಮಾಡುವುದು.

೬) ದೂರುಗಳ ಸಮಿತಿ ರಚನೆಗೊಂಡ ನಂತರ ಮೊದಲನೇ ಸಭೆ ಜಿಲ್ಲಾಧಿಕಾರಿ ಅಥವಾ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆಯತಕ್ಕದ್ದು. ಈ ಸಭೆಯಲ್ಲಿ ಸಮಿತಿಯು ಅಧ್ಯಕ್ಷರು ಹಾಗೂ ಸದಸ್ಯ ಕಾರ್ಯದರ್ಶಿಯವರನ್ನು ಆಯ್ಕೆ ಮಾಡುವುದು. ಸರ್ವೋಚ್ಚ ನ್ಯಾಯಾಲಯದ ತೀರ್ಪಿನನ್ವಯ ಸಮಿತಿಯ ಅಧ್ಯಕ್ಷರು ಮಹಿಳೆಯಾಗಿರುವಂತೆ ಎಚ್ಚರಿಕೆ ವಹಿಸುವುದು.

೭) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಾಯಕ ನಿರ್ದೇಶಕರು ದೂರುಗಳ ಸಮಿತಿಯ ಸಭೆಗಳಿಗೆ ವೀಕ್ಷಕರಾಗಿ ಭಾಗವಹಿಸುವರು.

ದೂರುಗಳ ಸಮಿತಿಗೆ ಸೌಲಭ್ಯಗಳನ್ನು ಒದಗಿಸುವುದು :

ದೂರುಗಳ ಸಮಿತಿಯು ಕಾರ್ಯ ನಿರ್ವಹಿಸಲು ಅನುಕೂಲವಾಗುವಂತೆ, ಜಿಲ್ಲಾಧಿಕಾರಿಗಳ ಮತ್ತು ಜಿಲ್ಲಾ ಪಂಚಾಯತ್ ಕಛೇರಿಗಳಲ್ಲಿ ಪೀಠೋಪಕರಣಗಳನ್ನೊಳಗೊಂಡ ಒಂದು ಕೊಠಡಿಯನ್ನು ಒದಗಿಸುವುದು. ದೂರುಗಳ ಸಮಿತಿಯ ಕೆಲಸ ನಿರ್ವಹಿಸಲು ಜಿಲ್ಲಾಧಿಕಾರಿಗಳ ಮತ್ತು ಜಿಲ್ಲಾ ಪಂಚಾಯತ್ ಕಛೇರಿಯಿಂದ ಒಬ್ಬ ಮಹಿಳಾ ಸಿಬ್ಬಂದಿಯನ್ನು ನೇಮಿಸುವುದು. ದೂರುಗಳನ್ನು ಪಡೆದುಕೊಳ್ಳಲು ಜಿಲ್ಲಾಧಿಕಾರಿ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಮತ್ತು ಜಿಲ್ಲಾ ಪಂಚಾಯತ್ ಕಛೇರಿಗಳಲ್ಲಿ ಸೂಕ್ತ ಸ್ಥಳದಲ್ಲಿ ಇಡಲು ಬೀಗವನ್ನೊಳಗೊಂಡ ಒಂದು ದೂರು ಪೆಟ್ಟಿಗೆಯನ್ನು ಒದಗಿಸುವುದು. ಮತ್ತೊಂದು ದೂರುಗಳ ಪೆಟ್ಟಿಗೆಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಾಯಕ ನಿರ್ದೇಶಕರ ಕಛೇರಿಯಲ್ಲಿಡಲಾಗುವುದು.

ದೂರುಗಳ ಸಮಿತಿಯ ಸಭೆಗಳು ಪ್ರತಿ ತಿಂಗಳೂ ೫ನೇ ತಾರೀಖಿನಂದು ನಡೆಯತಕ್ಕದ್ದು. ಆದಾಗ್ಯೂ ಅವಶ್ಯಕತೆಯಿದ್ದಲ್ಲಿ ತಿಂಗಳಲ್ಲಿ ಒಂದಕ್ಕಿಂತ ಹೆಚ್ಚು ಸಭೆಗಳನ್ನು ನಡೆಸಬಹುದು.

ಒಂದು ವೇಳೆ ೨೧ನೇ ತಾರೀಖು ಭಾನುವಾರ ಅಥವಾ ರಜಾ ದಿನ ಬಂದಲ್ಲಿ ಸಭೆಯನ್ನು ಮುಂದಿನ ಕಛೇರಿಯ ದಿನದಲ್ಲಿ ನಡೆಸುವುದು.

ಅಪರಾಧ ಕೃತ್ಯ ಜರುಗಿಸುವ ಎಲ್ಲಾ ಪ್ರಕರಣಗಳಲ್ಲಿ ಜಿಲ್ಲೆಗಳ ಜಿಲ್ಲಾಧಿಕಾರಿ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಮತ್ತು ಜಿಲ್ಲಾ ಪೋಲೀಸ್ ಅಧಿಕಾರಿ (ಎಸ್.ಪಿ.) ಯವರು ಬಹಳ ಹತ್ತಿರದಿಂದ ಅನ್ಯೋನ್ಯವಾಗಿ ಕೆಲಸ ನಿರ್ವಹಿಸತಕ್ಕದ್ದು.

**ಸಚಿವಾಲಯಕ್ಕೆ ದೂರುಗಳ ಸಮಿತಿ:**

ರಾಜ್ಯಮಟ್ಟದಲ್ಲಿ ಸಚಿವಾಲಯಕ್ಕೆ ಒಂದೇ ಒಂದು ದೂರುಗಳ ಸಮಿತಿ ಇರತಕ್ಕದ್ದು. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ರಚಿಸಿರುವ ಮಾದರಿಯಲ್ಲಿ ದೂರುಗಳ ಸಮಿತಿ ರಚನೆಯ ಕಾರ್ಯವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯವರು ಆರಂಭಿಸಬೇಕು.

**ನಿರ್ದೇಶನಾಲಯಗಳು, ನಿಗಮಗಳು, ಆಯೋಗಗಳು ಮುಂತಾದವುಗಳಿಗೆ ದೂರುಗಳ ಸಮಿತಿ:**

ಪ್ರತಿ ಇಲಾಖೆ ಮುಖ್ಯಸ್ಥರು, ನಿಗಮಗಳ ವ್ಯವಸ್ಥಾಪಕ ನಿರ್ದೇಶಕರು, ಸಾರ್ವಜನಿಕ ಉದ್ಯಮಗಳು, ಆಯೋಗಗಳ ಮುಖ್ಯಸ್ಥರು, ಮಂಡಳಿಗಳು ಇತ್ಯಾದಿ, ಅವರದೇ ಆದ ದೂರುಗಳ ಸಮಿತಿಯನ್ನು ರಚಿಸುವರು. ಉದಾಹರಣೆಗೆ, ಪೋಲೀಸ್ ಆಯುಕ್ತರು, ಬೆಂಗಳೂರು ಹಾಗೂ ಡಿಜಿಪಿ ಕಛೇರಿಗಳಲ್ಲಿ ಒಂದೊಂದು ದೂರುಗಳ ಸಮಿತಿ ಇರತಕ್ಕದ್ದು. ದೂರುಗಳ ಸಮಿತಿಗೆ ಸರ್ಕಾರೇತರ ಸಂಸ್ಥೆಗಳನ್ನು ಆರಿಸುವಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರನ್ನು ಸಂಪರ್ಕಿಸಬಹುದು. ಸಮಿತಿಗಳ ಅಗತ್ಯತೆಗಳನ್ನು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ಒದಗಿಸುವರು.

ದೂರುಗಳ ಸಮಿತಿ ರಚನೆ ಕಾರ್ಯವನ್ನು ಪೂರ್ಣಗೊಳಿಸಿ, ೩೦ನೇ ಸೆಪ್ಟೆಂಬರ್ ೨೦೦೨ ರೊಳಗೆ ಪ್ರಕಟಗೊಳಿಸಬೇಕು. ಈ ಕಾರ್ಯವನ್ನು ಪ್ರತಿ ೨ ವರ್ಷಗಳಿಗೊಮ್ಮೆ ಪುನರಾವೃತ್ತಿ ಮಾಡಬೇಕು. ಈ ರೀತಿ ಪ್ರತಿ ೨ ವರ್ಷಗಳಿಗೊಮ್ಮೆ ಪುನರ್ ರಚನೆಗೊಳ್ಳುವ ದೂರುಗಳ

M.(1R)

ಸಮಿತಿಗೆ, ಹಿಂದಿನ ದೂರುಗಳ ಸಮಿತಿಯಲ್ಲಿ ಪ್ರತಿನಿಧಿಸಲ್ಪಡದ್ದ ಇಲಾಖೆಗಳಿಗೆ ಪ್ರಾತಿನಿಧ್ಯ ಕೊಡುವಂತೆ ಖಚಿತಪಡಿಸಿಕೊಳ್ಳತಕ್ಕದ್ದು.

ಜಿಲ್ಲೆಗಳಲ್ಲಿ, ವಿವಿಧ ಇಲಾಖೆಗಳಲ್ಲಿ ಮತ್ತು ಸಾರ್ವಜನಿಕ ಉದ್ಯಮಗಳಲ್ಲಿ ದೂರುಗಳ ಸಮಿತಿಗಳು ರಚನೆಗೊಂಡ ಬಗ್ಗೆ ದಿನಾಂಕ ೩೧.೧೦.೨೦೦೨ ರೊಳಗಾಗಿ ಒಂದು ಅರೆ ಸರ್ಕಾರಿ ಪತ್ರವನ್ನು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಸದಸ್ಯ ಕಾರ್ಯದರ್ಶಿಯವರಿಗೆ ಬರೆಯತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಪುಲಿಯಪ್ಪ) 2-9-02
ಸರ್ಕಾರದ ಅಧೀನ ಕಾರ್ಯದರ್ಶಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

೧) ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
೨) ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
೩) ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಕಾವೇರಿ ಭವನ, ಬೆಂಗಳೂರು.
೪) ಎಲ್ಲಾ ಜಿಲ್ಲಾ [illegible] ಅಧಿಕಾರಿಗಳು
೫) ಶಾಖಾಧಿಕಾರಿಗಳು(ಎ,ಬಿ,ಸಿ ಮತ್ತು ಪತ್ರ ಸ್ವೀಕಾರ ಹಾಗೂ ರವಾನೆ ಶಾಖೆ)ಮಮಾಇ.
೬) ಶಾಖೆಯ ರಕ್ಷಾ ಕಡತ/ಇತರೆ ಪ್ರತಿಗಳು.